ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಗಣಪತಿ ಮತ್ತು ಇತರರು -ವಿರುದ್ಧ-ವಿನೋದ್ ಮತ್ತು ಇನ್ನೊಬ್ಬರು

ರಿಟ್ ಅರ್ಜಿಸಂಖ್ಯೆ: 202514/2017 (ಜಿಎಮ್-ಎಮ್ಎ) ಇತರೆ, ದಿನಾಂಕ 3 ನೇ ಡಿಸೆಂಬರ್, 2018

ಆಜ್ಞೆ

ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಅರ್ಜಿದಾರರ ಪರ ಹಾಜರಾದ ಹಾಜರಾದ ಮಾನ್ಯ ನ್ಯಾಯವಾದಿಗಳ ಹಾಗೂ ಪತ್ಯರ್ಜಿದಾರ-ವಿಮಾಕರ್ತರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಯಿತು.

2. ಅರ್ಜಿದಾರರು ಸಲ್ಲಿಸಿದ ಲಿಖಿತ ನಿವೇದನೆಗಳನ್ನು ದಾಖಲೆಗೆ ತೆಗೆದುಕೊಳ್ಳಲಾಯಿತು.

3. ಎಮ್ವಿ.ಎಫ್ಆರ್.ಸಂಖ್ಯೆ: 416/2017 ರಲ್ಲಿ ಹೊರಡಿಸಿದದಿನಾಂಕ: 9.6.2017 ರ ಆದೇಶದಿಂದ (ಅನುಬಂಧ-ಇ) ಬಾಧಿತರಾಗಿ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.ಅನುಬಂಧ- ಇ ಇದನ್ನು ಪರಿಶೀಲಿಸಲಾಗಿ, ಎಮ್ಎಫ್ಸಂಖ್ಯೆ: 201210/15 ರಲ್ಲಿ ಈ ನ್ಯಾಯಾಲಯವು ಹೊರಡಿಸಿದ ಆಜ್ಞೆಯ ಕಾರಣದಿಂದ ಮೊಕದ್ದಮೆಯನ್ನು ನಡೆಸಲು ಮತ್ತು ತತ್ಸಂಬಂಧಿ ವಿಷಯಗಳಿಗೆ ಸಂಬಂಧಿಸಿದಂತೆ ಕಚೇರಿಯು ಆಕ್ಷೇಪಣೆಯನ್ನು ಎತ್ತಿರುವುದು ಕಂಡುಬಂದಿದೆ.ಸದರಿ ಎಮ್ಎಫ್ನಲ್ಲಿ, ಈ ನ್ಯಾಯಾಲಯವು,ದಿನಾಂಕ: 15.11.2016 ರಂದು ತೀರ್ಪನ್ನು ನೀಡುವಾಗ, ಮಹಾರಾಷ್ಟ್ರದ ಗಡಿಯೊಳಗೆ ಸಂಭವಿಸಿದಂಥ ಅಪಘಾತವು ವ್ಯಾಜ್ಯ ಕಾರಣವಾಗಿರುವ ಕರ್ನಾಟಕ ರಾಜ್ಯದಲ್ಲಿನ ಮೊಕದ್ದಮೆಗಳನ್ನು ಸ್ವೀಕರಿಸಬಾರದು ಮತ್ತು ಅರ್ಜಿಗಳನ್ನು ಆ ರಾಜ್ಯದಲ್ಲಿ ಮಾತ್ರ ಸಲ್ಲಿಸತಕ್ಕದ್ದು ಎಂದು ಪ್ರಧಾನ ಜಿಲ್ಲಾ ನ್ಯಾಯಾಧೀಶರು, ವಿಜಯಪುರ ಇವರಿಗೆ ಸೂಚನೆಗಳನ್ನು ನೀಡಲಾಗಿತ್ತು.

4. ಸದರಿ ಆಜ್ಞೆಯನ್ನು ಪರಿಶೀಲಿಸಲಾಗಿ, ಕರ್ನಾಟಕ ರಾಜ್ಯದ ಹೊರಗೆ ವ್ಯಾಜ್ಯ ಕಾರಣಗಳು ಉದ್ಭವಿಸಿದಲ್ಲಿ, ಅವುಗಳನ್ನು ಸ್ವೀಕರಿಸಬಾರದು ಮತ್ತು ಪಕ್ಷಕಾರರಿಗೆ, ವ್ಯಾಜ್ಯ ಕಾರಣ ಉದ್ಭವಿಸಿದ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯವನ್ನು ಸಂಪರ್ಕಿಸುವಂತೆ ನಿರ್ದೇಶಿಸಬೇಕೆಂದು ಸೂಚಿಸಿರುವುದು ತಿಳಿದುಬಂದಿತು.ಹೆಚ್ಚು ನಿರ್ದಿಷ್ಟವಾಗಿ, ಸದರಿ ಮೊಕದ್ದಮೆಯಲ್ಲಿ, ಅಪಘಾತ ಚ ಸಂಭವಿಸಿದ ಸಂಗತಿಯ ಹಿನ್ನಲೆಯಲ್ಲಿ, ಮಹಾರಾಷ್ಟ್ರ ರಾಜ್ಯದಲ್ಲಿ ವ್ಯಾಜ್ಯ ಕಾರಣ ಉದ್ಭವಿಸುತ್ತದೆಂದು ಮತ್ತು ಪಕ್ಷಕಾರರು ಮಹಾರಾಷ್ಟ್ರ ರಾಜ್ಯದಲ್ಲಿ ವಾಸಿಸುತ್ತಿದ್ದಾರೆಂದು ನ್ಯಾಯಾಲಯದ ಮುಂದೆ ಚರ್ಚಿಸಲಾಯಿತು.

5.ದಿನಾಂಕ: 5.11.2018 ರಂದು, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಸಿವಿಲ್ ಅಪೀಲುಸಂಖ್ಯೆ: 21822/17 ರಲ್ಲಿ (ಎಸ್ಎಲ್ಪಿ (ಸಿ) ಸಂ. 14233/2017 ರಿಂದ ಉದ್ಭವಿಸಿದೆ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಚ ಆಜ್ಞೆಯ ಪ್ರತಿಯನ್ನು ಮಂಡಿಸಿದ್ದಾರೆ.ವಾಸ್ತವದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಪೀಲಿಗೆ ಅನುಮತಿ ನೀಡುವಾಗ, ಎಮ್ಎಫ್ಎಸಂಖ್ಯೆ: 201210/15 ರಲ್ಲಿ ಉಚ್ಚ ನ್ಯಾಯಾಲಯದ ತೀರ್ಪನ್ನು ತಳ್ಳಿಹಾಕಿದೆ ಮತ್ತು ವಿಳಂಬ ಹಂತದಲ್ಲಿ, ಪಕ್ಷಕಾರರು ಪ್ರಾದೇಶಿಕ ಅಧಿಕಾರ ವ್ಯಾಪ್ತಿಯ ಪ್ರಶ್ನೆಯನ್ನೇ

ಎತ್ತುವಂತಿಲ್ಲವೆಂದು ಕಂಡಿಕೆ 6 ರಲ್ಲಿ ನಿರ್ಣಯಿಸಿದೆ.ಆ ತರುವಾಯ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ತೀರ್ಪನ್ನು ಮಾರ್ಪಡಿಸುವ ಮೂಲಕ, ನ್ಯಾಯಾಧಿಕರಣವು ನೀಡಿದ ಪರಿಹಾರವನ್ನು ಹೆಚ್ಚಿಸಿದೆ.

6. ಪ್ರಸ್ತುತ ಮೊಕದ್ದಮೆಯಲ್ಲಿ, ವಿವಾದವು, ಕ್ಲೇಮು ಅರ್ಜಿಯನ್ನು ಸ್ವೀಕರಿಸಲು ನ್ಯಾಯಾಲಯದ ಪ್ರಾದೇಶಿಕ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದೆ ಮತ್ತು ಸಂಬಂಧಪಟ್ಟಿದುದಾಗಿದೆ.ಎಮ್ಎಫ್ 201210/15 ರಲ್ಲಿ, ಅಪಘಾತವು ಕರ್ನಾಟಕ ರಾಜ್ಯದ ಹೊರಗೆ, ಎಂದರೆ ಮಹಾರಾಷ್ಟ್ರ ರಾಜ್ಯದಲ್ಲಿ ಸಂಭವಿಸಿದೆ ಮತ್ತು ಅದರಿಂದಾಗಿ ಕರ್ನಾಟಕ ರಾಜ್ಯದಲ್ಲಿ ವ್ಯಾಜ್ಯ ಕಾರಣವು ಉದ್ಭವಿಸುವುದಿಲ್ಲ ಎಂದು ವಾದಿಸಲಾಗಿದೆ.

7. 166 ನೇ ಪ್ರಕರಣದ ( 2) ನೇ ಉಪ-ಪ್ರಕರಣವನ್ನು ಓದಲಾಗಿ, ಅದರಲ್ಲಿ ಕ್ಲೇಮುದಾರರಿಗೆ ಬಹು-ಅಧಿಕಾರ ವ್ಯಾಪ್ತಿಗಳನ್ನು ಪ್ರಧಾನ ಮಾಡಲಾಗಿದೆ ಹಾಗೂ ತನ್ನ ಕ್ಲೇಮನ್ನು ಯಾವ ನ್ಯಾಯಾಧಿಕರಣದ ಮುಂದೆ ನಿರೂಪಿಸಬೇಕೆಂದು ಆತನು ಅಪೇಕ್ಷಿಸುವನೋ ಆ ನ್ಯಾಯಾಧಿಕರಣವನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಆತನಿಗೆ ನಿಹಿತವಾಗಿದೆ ಎಂಬ ಸಂಗತಿಯನ್ನು ವ್ಯಕ್ತಪಡಿಸುತ್ತದೆ.ಅಪಘಾತ ಸಂಭವಿಸಿರುವ ಪ್ರದೇಶದಲ್ಲಿ ಅಥವಾ ಆತನು ವಾಸಿಸುತ್ತಿರುವ ಅಥವಾ ಆತನು ವ್ಯವಹಾರ ನಡೆಸುತ್ತಿರುವ ಸ್ಥಳದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ಅಥವಾ ಪ್ರತಿವಾದಿಯು ವಾಸಿಸುತ್ತಿರುವ ನ್ಯಾಯಾಧಿಕರಣದ ಸ್ಥಳೀಯ ವ್ಯಾಪ್ತಿಯ ಒಳಗೆ ದಾವೆಯನ್ನು ಹೂಡುವ ಆಯ್ಕೆಯನ್ನು ಕ್ಲೇಮುದಾರನು ಹೊಂದಿರುತ್ತಾನೆ.

8. ಹಾಗಾಗಿ, ಕ್ಲೇಮುದಾರನು " ಎ " ನಗರದಲ್ಲಿ ವಾಸಿಸುತ್ತಿದ್ದರೆ ಮತ್ತು " ಬಿ " ನಗರದಲ್ಲಿ ವ್ಯವಹಾರವನ್ನು ನಡೆಸುತ್ತಿದ್ದರೆ, ಪ್ರತಿವಾದಿಯು " ಸಿ ' ನಗರದಲ್ಲಿ ವಾಸಿಸುತ್ತಿದ್ದರೆ ಮತ್ತು ಅಪಘಾತವು " ಡಿ " ನಗರದಲ್ಲಿ ಸಂಭವಿಸಿದ್ದರೆ, ಆಗ, ಈ ನಾಲ್ಕು ನಗರಗಳಲ್ಲಿ ಯಾವುದೇ ನಗರದಲ್ಲಿ ಇರುವ ನ್ಯಾಯಾಧಿಕರಣದ ಮುಂದೆ ವ್ಯವಹರಣೆಗಳನ್ನು ಹೂಡಲು ಕ್ಲೇಮುದಾರನಿಗೆ ಅವಕಾಶವಿದೆ ಹಾಗೂ ಉಪಬಂಧದ ವ್ಯಾಪ್ತಿಯನ್ನು ಕಡಿಮೆ ಮಾಡುವ ಯಾವುದೇ ಇತರ ಅರ್ಥವಿವರಣೆಯು, ಅಧಿನಿಯಮದ ಮತ್ತು 166 ( 2) ನೇ ಪ್ರಕರಣದ ಉಪಬಂಧಗಳ ಉದ್ದೇಶವನ್ನು ಹಾಳುಗೆಡುವವಬಹುದು.

ಶಾಸನವು, ಶಾಸನದ ಪ್ರಯೋಜನಕಾರಿ ಅಂಶವಾಗಿದೆ ಮತ್ತು 166 ನೇ ಪ್ರಕರಣದ ( 2) ನೇ ಉಪ-ಪ್ರಕರಣವನ್ನು ಸದರಿ ಉದ್ದೇಶವನ್ನು ಮಂಡಿಸಲು ರಚಿಸಲಾಗಿದೆ ಹಾಗೂ ಉಪಬಂಧಗಳ ವ್ಯಾಪ್ತಿ ಮತ್ತು ಪರಿಧಿಯನ್ನು ಸಂಕುಚಿತಗೊಳಿಸಲಾಗುವುದಿಲ್ಲ ಅಥವಾ ಕ್ಲೇಮು ಅರ್ಜಿಗಳಿಗೆ, ಅಪಘಾತ ಸಂಭವಿಸಿದ ಸ್ಥಳೀಯ ಮಿತಿಗಳೊಳಗಿರುವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾತ್ರ ಆದ್ಯತೆ ನೀಡಲಾಗುವುದು ಎಂದು ಹೇಳುವ ರೀತಿಯಲ್ಲಿ ಅನ್ಯಥಾ ಓದಲಾಗದು ಮತ್ತು ಅರ್ಥ ವಿವರಿಸಲಾಗದು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಿದೆ.

9. ಪ್ರಸ್ತುತ ಮೊಕದ್ದಮೆಯಲ್ಲಿ, ಅಪಘಾತವು ಮಹಾರಾಷ್ಟ್ರ ರಾಜ್ಯದ ಒಳಗೆ ಸಂಭವಿಸಿದೆ ಮತ್ತು ಅದರಿಂದಾಗಿ, ಯಾವ ಪ್ರದೇಶದಲ್ಲಿ ಅಪಘಾತ ಸಂಭವಿಸಿದೆಯೋ ಆ ಪ್ರದೇಶದೊಳಗಿನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಮಾತ್ರ ಅನ್ವಯಿಸಬೇಕಾಗುತ್ತದೆ ಎಂದು ನಿರ್ಣಯಿಸುವಲ್ಲಿ ನ್ಯಾಯಾಧಿಕರಣವು ಗಂಭೀರ ತಪ್ಪನ್ನು ಎಸಗಿದೆ.ಇದಲ್ಲದೆ, ತೀರ್ಪನ್ನು ತಪ್ಪಾಗಿ ಓದಿರುವ ಕಾರಣದಿಂದ ಆಕ್ಷೇಪಣೆ ಕಂಡುಬಂದಿರಬೇಕು ಮತ್ತು ಎಮ್ಎಫ್ಸಂಖ್ಯೆ: 201210/15 (ಅನುಬಂಧ-ಡಿ) ಯಲ್ಲಿ ಆದೇಶವನ್ನು ನೀಡಲಾಗಿದೆ.

10. ಅರ್ಜಿದಾರರು ಸೋಲ್ಲಾಪುರ ತಾಲೂಕು ಮತ್ತು ಜಿಲ್ಲೆಯಲ್ಲಿನ ಗ್ರಾಮದ ನಿವಾಸಿಗಳಾಗಿರುವರೆಂದು ಸ್ವತಃ ವಿವರಿಸಿದ್ದು, ಒಪ್ಪಿಕೊಂಡಿರುವಂತೆ ಅದು ಪಕ್ಕದ ರಾಜ್ಯದ ಎಂದರೆ ಮಹಾರಾಷ್ಟ್ರ ರಾಜ್ಯದ ಪ್ರಾದೇಶಿಕ ಗಡಿಯೊಳಗಿರುವುದೆಂಬ ಸಂಗತಿಯ ಕಾರಣದಿಂದ, ಕ್ಲೇಮು ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಾಧಿಕರಣವು, ಅಧಿಕಾರ ವ್ಯಾಪ್ತಿ ಹೊಂದಿರುವುದಿಲ್ಲವೆಂದು ಮಾನ್ಯ ನ್ಯಾಯಾಧೀಶರು ಅಭಿಪ್ರಾಯಪಟ್ಟಿರುವರೆಂದು ವಾದಿಸಲಾಗಿದೆ.ಇದಲ್ಲದೆ, ಮಾನ್ಯ ಏಕಪೀಠ ನ್ಯಾಯಾಧೀಶರು ಕಂಡಿಕೆ 7 ರಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದ್ದಾರೆ:

"7. ಹಾಗೆ ಮಾಡುವಾಗ, ಕರ್ನಾಟಕ ರಾಜ್ಯದ ಅಧಿಕಾರ ವ್ಯಾಪ್ತಿಯೊಳಗೆ ತೆಗೆದುಕೊಳ್ಳದ ವ್ಯಾಜ್ಯ ಕಾರಣವಿರುವಲ್ಲಿ ಅಂಥ ಕೇಮು ಅರ್ಜಿಗಳನ್ನು ಪುರಸ್ಕರಿಸಬಾರದೆಂಬುದನ್ನು ಮತ್ತು ಮಹಾರಾಷ್ಟ್ರ ಗಡಿಯ ಒಳಗೆ ವ್ಯಾಜ್ಯ ಕಾರಣವನ್ನು ತೆಗೆದುಕೊಂಡಲ್ಲಿ, ಆ ಬಗ್ಗೆ ಸಲ್ಲಿಸಿದ ಕ್ಲೇಮು ಅರ್ಜಿಗಳನ್ನು ರಾಜ್ಯದಲ್ಲೇ ೧ ಸಲ್ಲಿಸಬೇಕೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಸ್ಪಷ್ಟ ಸೂಚನೆ ನೀಡುವುದರೊಂದಿಗೆ, ಈ ತೀರ್ಪಿನ ಪ್ರತಿಯನ್ನು ವಿಜಯಪುರದ ಪ್ರಧಾನ ಜಿಲ್ಲಾ ನ್ಯಾಯಾಧೀಶರಿಗೆ ನಿರ್ದೇಶಿಸಲಾಗಿದೆ. "

11. ಇದನ್ನು ಓದಿದಾಗ, ಮಾನ್ಯ ಏಕಪೀಠ ನ್ಯಾಯಾಧೀಶರು, ಅಧಿಕಾರವ್ಯಾಪ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಧಿಕರಣಗಳಿಗೆ ಎಚ್ಚರಿಕೆ ನೀಡಿದ್ದಾರೆ ಮತ್ತು ನ್ಯಾಯಾಧಿಕರಣಗಳು, ಪ್ರಾಮಾಣಿಕವಾಗಿ ಅಧಿಕಾರವ್ಯಾಪ್ತಿಯ ವಿಷಯದೆಡೆಗೆ ಗಮನಹರಿಸುವ ಅಗತ್ಯವಿದೆಯೆಂದು ಮತ್ತು ಅಗತ್ಯವಿದ್ದಂತೆ ಮತ್ತು ಅಗತ್ಯವಿದ್ದಾಗ ಅಥವಾ ಹಾಗೆ ಮಾಡಲು ಕೇಳಿದಾಗ, ಅವು ಗಮನವನ್ನು ನೀಡಬೇಕಾಗುತ್ತದೆ ಎಂಬುದನ್ನು ಗ್ರಹಿಸಬಹುದಾಗಿದೆ.

12. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ತಮ್ಮ ವಾದವನ್ನು ಪುಷ್ಟೀಕರಿಸಲು ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

i) ಮಾಲತಿ ಸರ್ದಾರ್ -ವಿರುದ್ಧ ರಾಷ್ಟ್ರೀಯ ವಿಮಾ ಕಂಪನಿ ನಿಯಮಿತ.,

ii) ಮಂಟೂ ಸರ್ಕಾರ್ -ವಿರುದ್ಧ-ಒರಿಯಂಟಲ್ ವಿಮಾ ಕಂಪನಿ ನಿಯಮಿತ ಮತ್ತು ಇತರರು

13. ಇದನ್ನು ವಿರೋಧಿಸಿ, ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ಸಹ ತಮ್ಮ ವಾದಕ್ಕೆ ಬೆಂಬಲವಾಗಿ ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

i) ಸುಭದ್ರ ಮತ್ತು ಇತರರು ವಿರುದ್ಧ ಪಂಕಜ್ ಮತ್ತು ಇನ್ನೊಬ್ಬರು, ಐಎಲ್ಆರ್ 2013 ಕೆಎಆರ್ 102

ii) ಅನಿತಾ ಮತ್ತು ಇತರರು ವಿರುದ್ಧ ರವೀಂದ್ರನಾಥ್ ಮತ್ತು ಇನ್ನೊಬ್ಬರು, 2017 ಕೆಎಎನ್ಟಿಎಮ್ಸಿ 315 (ಕೆಎಎನ್ಟಿ).

14. ಇಲ್ಲಿ ಪ್ರಾದೇಶಿಕ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದ ವಿಷಯವನ್ನು ಕುರಿತು ನ್ಯಾಯ ನಿರ್ಣಯ ನೀಡಿರುವುದು, ಸಂದರ್ಭಕ್ಕೆ ಹೊರತಾಗುವುದು ಎಂಬುದನ್ನು ಗಮನಿಸುವುದು ಸುಸಂಗತವಾದುದಾಗಿದೆ.ಆದರೆ, ಮೇಲೆ ಹೇಳಿದಂತೆ, ಕ್ಲೇಮುದಾರನಿಗೆ ಬಹು ಆಯ್ಕೆಗಳನ್ನು ಪ್ರದತ್ತಗೊಳಿಸುವ ( 2) ನೇ ಉಪ-ಪ್ರಕರಣದ ಉಪಬಂಧದ ವ್ಯಾಪಕ ಪರಿಧಿ ಮತ್ತು ವ್ಯಾಪ್ತಿಯ ದೃಷ್ಟಿಯಿಂದ, ಕ್ಲೇಮನ್ನು ಪುರಸ್ಕರಿಸಲು, ನ್ಯಾಯಾಧಿಕರಣದ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಎತ್ತಿದಾಗಲೆಲ್ಲಾ ಆ ಕುರಿತು ನಿರ್ಣಯ ನೀಡುವುದು

ನ್ಯಾಯಾಧಿಕರಣದ ಜವಾಬ್ದಾರಿಯಾಗಿದೆ ಮತ್ತು ಕ್ಲೇಮುದಾರನಿಗೆ ತನ್ನ ಮೊಕದ್ದಮೆಯನ್ನು ಸಾಬೀತುಪಡಿಸುವ ಅವಕಾಶವನ್ನು ನ್ಯಾಯಾಧಿಕರಣವು ನೀಡತಕ್ಕದ್ದು ಹಾಗೂ ಸದರಿ ನ್ಯಾಯಾಧಿಕರಣದ ಅಧಿಕಾರವ್ಯಾಪ್ತಿಯನ್ನು ಅನ್ವಯಿಸಲು ಆತನು ಹೇಗೆ ಹಕ್ಕುಳ್ಳವನಾಗಿದ್ದಾನೆಂಬುದನ್ನು ತಿಳಿಸತಕ್ಕದ್ದು.ಅಪಘಾತವು ಪಕ್ಕದ ಅಥವಾ ಯಾವುದೇ ಇತರ ರಾಜ್ಯದ ಗಡಿಗಳೊಳಗೆ ಸಂಭವಿಸಿದೆ ಎಂಬ ಕಾರಣ ಮಾತ್ರದಿಂದ ನ್ಯಾಯಾಧಿಕರಣವು ಕ್ಲೇಮು ಅರ್ಜಿಯನ್ನು ತಿರಸ್ಕರಿಸಲಾಗುವುದಿಲ್ಲ.ಮೇಲೆ ವಿವರವಾಗಿ ಹೇಳಿದಂತೆ ನ್ಯಾಯಾಧಿಕರಣವು, ಅರ್ಜಿದಾರನು ಅದರ ಅಧಿಕಾರವ್ಯಾಪ್ತಿಯೊಳಗಿನ ' ನಿವಾಸಿ'ಯಾಗಿರುವುದಿಲ್ಲ ಅಥವಾ ವ್ಯವಹಾರವನ್ನು ನಡೆಸುತ್ತಿಲ್ಲವೆಂದಾಗಲಿ ಮತ್ತು ಪ್ರತಿವಾದಿಯು/ಪ್ರತ್ಯರ್ಜಿದಾರನು ಅದರ ಸ್ಥಳೀಯ ಪರಿಮಿತಿಯೊಳಗೆ ವಾಸಿಸುತ್ತಿಲ್ಲವೆಂದಾಗಲಿ ನಿರ್ಣಯ ನೀಡುವ ಅಗತ್ಯವಿಲ್ಲ ಮತ್ತು ಆ ತರುವಾಯ ಮಾತ್ರವೇ, ಪ್ರಸ್ತುತ ಮೊಕದ್ದಮೆಯಲ್ಲಿ ಮಾಡಿದಂತೆ ಮನವಿ ಪತ್ರಗಳನ್ನು ಹಿಂತಿರುಗಿಸಿ, ನ್ಯಾಯಾಧಿಕರಣವು ಆಜ್ಞೆಯನ್ನು ಹೊರಡಿಸಬಹುದಾಗಿದೆ.

15. ಇದಕ್ಕೆ ತದ್ವಿರುದ್ಧವಾಗಿ, 5 ನೇ ಕಂಡಿಕೆಯಲ್ಲಿ ನ್ಯಾಯಾಧಿಕರಣವು, ಎಮ್ಎಫ್ಎ -201210/15 ರಲ್ಲಿ ಈ ನ್ಯಾಯಾಲಯದ ಅಭಿಪ್ರಾಯವನ್ನು ಅವಲಂಬಿಸಿದೆ ಮತ್ತು ಪಕ್ಕದ ರಾಜ್ಯದ ಪ್ರಾದೇಶಿಕ ಪರಿಮಿತಿಗಳೊಳಗೆ ಅಪಘಾತ ಸಂಭವಿಸಿದೆಯೆಂಬ ಸಂಗತಿಯ ಕಾರಣವನ್ನು ಮಾತ್ರ ಅವಲಂಬಿಸಿ, ಅರ್ಜಿದಾರರು ನ್ಯಾಯಾಧಿಕರಣದ ಪ್ರಾದೇಶಿಕ ವ್ಯಾಪ್ತಿಯೊಳಗೆ ವಾಸಿಸುತ್ತಿದ್ದಾರೆಯೇ ಅಥವಾ ವ್ಯವಹಾರ ನಡೆಸುತ್ತಿದ್ದಾರೆಯೇ ಅಥವಾ ಪ್ರತಿವಾದಿಯು ಅದರ ಪ್ರಾದೇಶಿಕ ವ್ಯಾಪ್ತಿಯೊಳಗೆ ವಾಸಿಸುತ್ತಿದ್ದಾರೆಯೇ ಎಂಬ ಸಂಗತಿಗಳನ್ನು ನಿರೂಪಿಸದೆಯೇ ಮತ್ತು ನಿರ್ಣಯಿಸದೆಯೇ ಸೂಕ್ತ ವೇದಿಕೆಯ ಮುಂದೆ ಮನವಿಪತ್ರಗಳನ್ನು D ಹಿಂದಿರುಗಿಸಲು ಮುಂದಾಗಿದೆ.

16. ಮೇಲೆ ಹೇಳಿದಂತೆ ಮತ್ತು ಈ ರೀತಿಯ ಸಂದರ್ಭಗಳು ಪುನರಾವರ್ತನ ಯಾಗದಿರುವಂತೆ, ಅಪಘಾತವು ಯಾವ ನ್ಯಾಯಾಧಿಕರಣದ ಅಧಿಕಾರವ್ಯಾಪ್ತಿಯಲ್ಲಿ ಸಂಭವಿಸಿತೋ ಆ ಅಧಿಕಾರ ವ್ಯಾಪ್ತಿಯೊಳಗಿನ ನ್ಯಾಯಾಧಿಕರಣದ ಮುಂದೆ, ಅರ್ಜಿದಾರನು/ಳು ತನ್ನ ಕ್ಲೇಮು ಅರ್ಜಿಯನ್ನು ಸಲ್ಲಿಸಲು ಹಕ್ಕುಳ್ಳವನಾ/ಳಾಗಿರುವುದಷ್ಟೇ ಅಲ್ಲದೆ, ಆತನು ಅಥವಾ ಆಕೆಯು, ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯೊಳಗೆ ವಾಸಿಸುತ್ತಿರುವನೋ/ಳೋ ಅಥವಾ ಪ್ರತಿವಾದಿಯು ಯಾವ ನ್ಯಾಯಾಧಿಕರಣದ ಸ್ಥಳೀಯ ಪರಿಮಿತಿಯೊಳಗೆ ವಾಸಿಸುತ್ತಿರುವನೋ/ಳೋ ಆ ನ್ಯಾಯಾಧಿಕರಣದಲ್ಲಿ ಕ್ಲೇಮು ಅರ್ಜಿಯನ್ನು ಸಲ್ಲಿಸಲು ಸಹ ಹಕ್ಕುಳ್ಳವನಾಗಿರುತ್ತಾನೆ/ಳಾಗಿರುತ್ತಾಳೆ. 'ಮುದಾರನು ವಾಸಿಸುತ್ತಿರುವಲ್ಲಿಯಷ್ಟೇ ಅಲ್ಲದೆ, ಆತನು ವ್ಯವಹಾರವನ್ನು ನಡೆಸುತ್ತಿರುವ ಸ್ಥಳದಲ್ಲಿಯೂ ಸಹ ಕೇಮನ್ನು ಸಲ್ಲಿಸಲು ಆತನು ಹಕ್ಕುಳ್ಳವನಾಗಿರುತ್ತಾನೆಂದು ಸಹ ಉಪಬಂಧ ಕಲ್ಪಿಸಲಾಗಿದೆ ಎಂಬುದನ್ನು ಗಮನಿಸುವುದು ಸುಸಂಗತವಾಗಿದೆ.ಹಾಗಾಗಿ, ಪಶ್ನಿತ ಆದೇಶವು, ಗಮನ ನೀಡದಿರುವ ಮೂಲಕ ಹಾಗೂ 166 ನೇ ಪ್ರಕರಣದ ( 2) ನೇ ಉಪ-ಪ್ರಕರಣಕ್ಕೆ ವಿರುದ್ಧವಾಗಿರುವುದರಿಂದ ನಿರರ್ಥಕವಾಗಿದೆ ಮತ್ತು ಅದನ್ನು ತಳ್ಳಿಹಾಕಲಾಗಿದೆ.ಮೇಲೆ ಹೇಳಿದಂತೆ, ನ್ಯಾಯಾಧಿಕರಣವು, 166 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ವ್ಯಾಪ್ತಿ ಮತ್ತು ಪರಿಧಿಯೆಡೆಗೆ ಅದರ ಗಮನ ಹರಿಸತಕ್ಕದ್ದು ಮತ್ತು ತರುವಾಯ, ಅರ್ಜಿಯ ಸಮರ್ಥನೀಯತೆಯನ್ನು ನಿರೂಪಿಸುವ ಅವಕಾಶವನ್ನು ನೀಡಿದ ನಂತರ ಸೂಕ್ತ ನಿರ್ಣಯ ತೆಗೆದುಕೊಳ್ಳತಕ್ಕದ್ದು.

ರಿಟ್ ಅರ್ಜಿಗಳನ್ನು ಅಂಗೀಕರಿಸಲಾಗಿದೆ.ಪ್ರಶ್ನಿತ ಆದೇಶವನ್ನು ತಳ್ಳಿ ಹಾಕಲಾಗಿದೆ.ಮೇಲೆ ಈ ನ್ಯಾಯಾಲಯವು ನೀಡಿದ ಅಭಿಪ್ರಾಯಗಳ ಹಿನ್ನಲೆಯಲ್ಲಿ ವಿಷಯವನ್ನು ಮರು-ಪರಿಗಣಿಸಲು ವಿಜಯಪುರದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಕ್ಕೆ ವಿಷಯವನ್ನು ಮರಳಿ ಕಳುಹಿಸಲಾಗಿದೆ.ನ್ಯಾಯಾಧಿಕರಣದ ಅಧಿಕಾರವ್ಯಾಪ್ತಿಯೊಳಗೆ ಯಾವುದೇ ವ್ಯಾಜ್ಯ ಎತ್ತಿದಂತೆ ಪ್ರತಿವಾದಿಯು ಯಾವುದೇ ವ್ಯಾಜ್ಯ ಕಾರಣವನ್ನು ಎತ್ತಿದರೆ, ಪ್ರಾದೇಶಿಕ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ ಅಥವಾ ಸಂಗತಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಯನ್ನು ಎತ್ತಿದರೆ, ಅದು ವಿಷಯದ ಮೂಲಕ್ಕೆ ಹೋಗುವುದರಿಂದ, ನ್ಯಾಯಾಧಿಕರಣವು ಅದನ್ನು ಪರಿಶೀಲಿಸಿ, ಪ್ರಮುಖ ವಿವಾದವಾಗಿ ವಿಲೆ ಮಾಡಲು ಅದನ್ನು ಪರಿಗಣಿಸತಕ್ಕದ್ದು ಮತ್ತು ತರುವಾಯ, ಗುಣಾರ್ಹತೆಗಳ ಆಧಾರದ ಮೇಲೆ ವಿಷಯವನ್ನು ಕುರಿತು ಅಧಿನಿಯಮದ ಅಡಿಯಲ್ಲಿ ಕಡ್ಡಾಯಪಡಿಸಿದಂತೆ ಅ ನ್ಯಾಯನಿರ್ಣಯಿಸಲು ಮುಂದುವರಿಯತಕ್ಕದ್ದು.

ತದನುಸಾರವಾಗಿ, ರಿಟ್ ಅರ್ಜಿಗಳನ್ನು ಕುರಿತು ಆದೇಶಿಸಲಾಗಿದೆ.